# ಸಂತೂರ್ ಹುಡುಗಿಯ ಬಣ್ಣದ ಕನಸು

**ಸಂತೂರ್ ಹುಡುಗಿ ಈಗ ಕನ್ನಡದ ಪಾಲಾಗಿದ್ದಾಳೆ. 'ತ್ರಿವಿಕ್ರಮ' ಸಿನಿಮಾದ ನಾಯಕಿಯಾಗಿ ನಟಿಸುತ್ತಿರುವ ಮುಂಬೈನ ಆಕಾಂಕ್ಷಾ ಶರ್ಮ ಅವರು ಕನ್ನಡ ಚಿತ್ರರಂಗದ ಕುರಿತು ಹೆಮ್ಮೆಯಿಂದ ಮಾತಾಡುತ್ತಾರೆ.**

■ ಪದ್ಮನಾಭ ಭಟ್



'ಸಂತೂರ್' ಸೋಪಿನ ಜಾಹೀರಾತು ಯಾರಿಗೆ ಗೊತ್ತಿಲ್ಲ? ಚಂದ್ರಕಾಂತಿಯ ತೇಯ್ದು ಮೈಬಣ್ಣವಾಗಿಸಿಕೊಂಡ ಹುಡುಗಿ ಒಂದು ಮಗುವಿನ ತಾಯಿ ಎಂದು ತಿಳಿದಾಕ್ಷಣ ನಿಬ್ಬೆರಗಾಗುವ ಆ ಕ್ಷಣದಲ್ಲಿ 'ಮಮ್ಮಿ?' ಎಂಬ ಮಾತು ನಮ್ಮ ಬಾಯಿಯಲ್ಲಿಯೂ ಅಯಾಚಿತವಾಗಿ ಹೊರಬೀಳುತ್ತದೆ. ಕ್ಯಾಡ್‌ಬರಿ ಚಾಕೋಲೆಟ್‌ನ ಜಾಹೀರಾತಿನಲ್ಲಿ ಇದೇ ಹುಡುಗಿ ಕಂಡಾಗಲೂ ನೋಡುವವರ ಮನಸಲ್ಲಿ ಚಾಕೋಲೆಟ್ ಸವಿಯೊಟ್ಟಿಗೆ ಸಂತೂರ್ ಘಮವೂ ಸೇರಿಕೊಂಡು ಹೊಸ ಸ್ವಾದದ ಪರಿಪಾಕ...

ಟೀವಿಯಲ್ಲಿ ಅನುದಿನವೂ ಕಂಡು ಆಹ್ಲಾದ ಹುಟ್ಟಿಸುವ ಈ ಕ್ಯಾಡ್‌ಬರಿ ಬೆಡಗಿ ಈಗ ಕನ್ನಡಕ್ಕೇ ಬಂದಿಳಿದಿದ್ದಾರೆ. ಮುಂಬೈ ಮೂಲದ ಈ ಆಕಾಂಕ್ಷಾ ಶರ್ಮಾ, ರವಿಚಂದ್ರನ್ ಮಗ ವಿಕ್ರಮ್ ಅವರ 'ತ್ರಿವಿಕ್ರಮ' ಸಿನಿಮಾ ನಾಯಕಿ. ಅಂದಹಾಗೆ, ಇದು ಆಕಾಂಕ್ಷಾಗೂ ಮೊದಲ ಸಿನಿಮಾ.

ಚಂದನವನದ ಮೂಲಕ ತಮ್ಮ ನಟನಾಪಯಣ ಆರಂಭಿಸುತ್ತಿರುವ ಅವರಿಗೆ ಕನ್ನಡ ಸಿನಿಮಾಗಳ ಬಗ್ಗೆ ಸಾಕಷ್ಟು ಅಭಿಮಾನವಿದೆ. 'ರವಿಚಂದ್ರನ್ ಅವರು ಚಿತ್ರರಂಗದಲ್ಲಿ ಹೊಸ ಅಲೆಯನ್ನು ಎಬ್ಬಿಸಿದವರು. ಅವರ ಮಗನ ಸಿನಿಮಾದ ಮೂಲಕ ನಾನು ನಟನೆ ಆರಂಭಿಸುತ್ತಿರುವುದು ನನಗೆ ತುಂಬಾ ಖುಷಿ ಕೊಟ್ಟಿದೆ. ಇನ್‌ಸ್ಟಾಗ್ರಾಮ್‌ನಲ್ಲಿ ನನ್ನ ಚಿತ್ರಗಳನ್ನು ನೋಡಿ ನನ್ನನ್ನು ಸಂಪರ್ಕಿಸಿ, ಮುಂಬೈಗೆ ಬಂದು ಆಡಿಷನ್ ಮಾಡಿ ಚಿತ್ರಕ್ಕೆ ಆಯ್ಕೆ ಮಾಡಿದರು. ಇದೊಂದು ಲವ್ ಸ್ಟೋರಿ. ಆದರೆ ಆ್ಯಕ್ಷನ್, ಹಾಸ್ಯ, ಭಾವುಕತೆ ಎಲ್ಲವೂ ಇದೆ. ನಾನೂ ಆ್ಯಕ್ಷನ್ ಮಾಡಿದ್ದೇನೆ' ಎಂದು ಅವರು ಹೇಳಿಕೊಳ್ಳುತ್ತಾರೆ.

ಕಳೆದ ಎರಡು ವರ್ಷಗಳಿಂದಲೂ ಅವರು ಮಾಡೆಲಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ನಟನೆಯ ಕಡೆಗೆ ಒಲವು ಇದ್ದರೂ ಸೂಕ್ತ ಅವಕಾಶಕ್ಕಾಗಿ ಕಾಯುತ್ತಿದ್ದರು. 'ತ್ರಿವಿಕ್ರಮ' ಚಿತ್ರದ ಕಥೆ ಮತ್ತು ಪಾತ್ರದ ಕುರಿತು ಕೇಳಿದಾಗ ತನ್ನ ಹಿರಿತೆರೆಪ್ರವೇಶಕ್ಕೆ ಇದೇ ಸರಿಯಾದ ಆಯ್ಕೆ ಅನಿಸಿದ್ದರಿಂದ ಒಪ್ಪಿಗೆಯ ಸಹಿ ಹಾಕಿದ್ದಾರೆ.

'ಇದು ಬರೀ ನಾಯಕಪ್ರಧಾನ ಸಿನಿಮಾ ಅಲ್ಲ. ನಾಯಕ ಮತ್ತು ನಾಯಕಿ ಇಬ್ಬರಿಗೂ ಸಮನಾದ ಅವಕಾಶ ಇಲ್ಲಿದೆ. ನನ್ನ ಪಾತ್ರಕ್ಕೂ ತುಂಬ ಮಹತ್ವವಿದೆ. ನನಗೂ, ವಿಕ್ರಮ್‌ಗೂ ಇದು ಮೊದಲ ಸಿನಿಮಾ. ಹಾಗಾಗಿ ಪರಸ್ಪರ ಹೊಂದಾಣಿಕೆಯಿಂದ ನಟಿಸುವುದು ಸಾಧ್ಯವಾಯ್ತು. ಚಿತ್ರತಂಡದಲ್ಲಿನ ಹಲವು ಹಿರಿಯರಿಂದ ಸಾಕಷ್ಟು ವಿಷಯಗಳನ್ನು ಕಲಿತುಕೊಂಡಿದ್ದೇನೆ' ಎನ್ನುವ ಅವರಿಗೆ ಕನ್ನಡದಲ್ಲಿಯೇ ಇನ್ನಷ್ಟು ಸಿನಿಮಾಗಳಲ್ಲಿ ನಟಿಸುವ ಹಂಬಲವೂ ಇದೆ.

'ದಕ್ಷಿಣ ಭಾರತದ ಚಿತ್ರರಂಗ ಸಾಕಷ್ಟು ಬೆಳೆದಿವೆ. ನಾನು ಈ ಸಿನಿಮಾ ಒಪ್ಪಿಕೊಳ್ಳುವುದಕ್ಕೂ ಮೊದಲು ಹಲವು ಕನ್ನಡ ಸಿನಿಮಾಗಳನ್ನು ನೋಡಿದ್ದೆ. ಈ ಸಿನಿಮಾದಲ್ಲಿ ಕೆಲಸ ಮಾಡುತ್ತ ಕನ್ನಡ ಕಲಿತುಕೊಳ್ಳಲು ಪ್ರಯತ್ನಿಸಿದ್ದೇನೆ' ಎನ್ನುತ್ತಾರೆ ಅವರು.

ಆಕಾಂಕ್ಷಾ ಕಲಿತಿದ್ದು ಆರ್ಕಿಟೆಕ್ಟ್. ಮೊದಲಿನಿಂದಲೂ ನೃತ್ಯವೆಂದರೆ ಪ್ರಾಣ. ಚಿತ್ರಕಲೆಯಲ್ಲಿಯೂ ಆಸಕ್ತಿ ಇದೆ. ಬಿಡುವು ಸಿಕ್ಕಾಗೆಲ್ಲ ಬೇರೆ ಬೇರೆ ಭಾಷೆಯ ಸಿನಿಮಾಗಳನ್ನು ನೋಡುವುದರಲ್ಲಿ ಮುಳುಗಿಬಿಡುತ್ತಾರೆ.

'ನಟಿಯಾಗಿ ಬೆಳೆಯಬೇಕು. ಕಥಾಪ್ರಧಾನ ಸಿನಿಮಾಗಳ ಭಾಗವಾಗಬೇಕು. ಮಹಿಳಾಪ್ರಧಾನ ಸಿನಿಮಾದಲ್ಲಿ ಕಾಣಿಸಿಕೊಳ್ಳಬೇಕು. ಆ್ಯಕ್ಷನ್ ದೃಶ್ಯಗಳಲ್ಲಿ ಕಾಣಿಸಿಕೊಳ್ಳಬೇಕು' ಹೀಗೆ ಕಣ್ಣ ತುಂಬ ನೂರು ಬಣ್ಣದ ಕನಸುಗಳನ್ನು ತುಂಬಿಕೊಂಡು ಚಂದನವನದಲ್ಲಿ ಅಡಿಯಿಟ್ಟಿರುವ ಈ ಸುಂದರಿಗೆ 'ರಾಮ್‌ಲೀಲಾ' ಸಿನಿಮಾದಲ್ಲಿ ದೀಪಿಕಾ ಪಡುಕೋಣೆ ನಟಿಸಿದಂಥ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು ಎಂಬ ಮಹದಾಸೆಯೂ ಇದೆ. ■